

**ಕೆ.ಪಿ. ಮೃತ್ಯುಂಜಯ**

ಕಲೆ: ರೂಪಶ್ರೀ ಕಲ್ಲಿಗನೂರು

# ಎಲೆಗಳ ತರಹ ಬಾಳುವುದಾದರೆ



ಎಲೆಗಳ ತರಹ ಬಾಳುವುದಾದರೆ ಮಾವೋ
ಅರಳಿಯೋ ಆಲವೋ
ಆಗಿ;

ಆಗಬಹುದಾದರೆ ಆ ಮರಗಳೇ
ಆಗಿ;

ಒಳಗಿನಗ್ನಿಗೆ ಬೇಕಿಲ್ಲದ ಸಿಟ್ಟು ಸೆಡೆವ
ಸುಡಲು ಕೋರುವೆ;
ಮತ್ತು
ಬೇಕಿಲ್ಲದ ದ್ವೇಷವನು.

ಪ್ರೀತಿ ಕರಗದ ಬೊಡ್ಡೆಗಳಲಿ
ಬಾಯ್ದೆರೆದ ಪೊಟರೆಗಳು ಹೇಗೂ
ಬರಮಾಡಿಕೊಳುವುವು
ಬೇಕು ಬೇಕಾದ ಹಕ್ಕಿಗಳ, ಹಾವುಗಳ

ಬಿಳಲುಗಳ ಜೋಕಾಲಿಯಲಿ
ಹೋದವರು ತಿರುಗಿ ಬಂದು ಆಡುವಂತಾಗಿ

ಕತೆ ತಾನೇ ತಾನಾಗಿ
ಅರಳುವುವು
ಕಾಲ ಬಿರಿ ಬಿರಿದು.
ಯಾರೋ ತೆರಳುವಂತೆ
ಬೆನ್ನ ಮರೆಯಿಂದ ಪೊರೆಬಿಟ್ಟು
ಗುಟ್ಟಾದ ಗುಟ್ಟುಗಳ ಅದುಮಿಟ್ಟು.

ಎಲೆ ಮರ ಎಂಬುದು
ಈಗ ಕಣ್ಣೊಳಗಿನ ನೆರಳು.

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68